(Sri H. S. RUDRAPPA.)

construct the Kariyappanna tank in Arakere village;

(*b*) whether any estimate is prepared for the construction of this tank;

(*c*) if so, the value of the estimate of this tank;

(*d*) the land that will be brought under irrigation?

A.—Sri Kadidal MANJAPPA (Minister for Revenue and Public Works).—

(*a*) Yes.
(*b*) Yes.
(*c*) Rs. 1,10,000.
(*d*) 90 acres.

Sri H. S. RUDRAPPA.—I have no supplementaries on that.

9 A.M.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಈ ಕೆರೆಯಿಂದ ಎಷ್ಟು ರಿಟರ್ನ್ ಬರುತ್ತದೆಂದು ಅಂದಾಜು ಮಾಡಿದ್ದೀರಿ?

ಶ್ರೀ ಕಡಿದಾಳ್ ಮಂಜಪ್ಪ.—90 ಎಕರೆಗೆ ನೀರು ಸರಬರಾಯಾಗುತ್ತದೆ. ಜಿದರ ಮೇಲೆ ರೆಕ್ಕಹಾಕ ಬಹುದು. 1,200 ರೂಪಾಯಿ ಒಂದು ಎಕರೆಗೆ ಆಗ ಬಹುದು.

Surrender of Amrithmahal Kavals in Gubbi Taluk.

Q.—897. Sri B. C. NANJUNDIAH (Kora).—

Will the Government be pleased to state:—

(*a*) when Rajakaval near Bidare in Chelur Hobli, Gubbi Taluk, and Ere Kaval near Alalaghatta in Hagalvadi Hobli in Gubbi Taluk were surrendered from the Amrithmahal Department to Revenue Department;

(*b*) the extent of these kavals;

(*c*) the purpose for the surrender:

(*d*) who are in possession of these lands at present?

A.—Sri Kadidal MANJAPPA (Minister for Revenue and Public Works).—

(*a*) Both these kavals were surrendered to the Revenue Department as per General Secretary's No. A.F. 7195, dated 1st February 1950.

Acres

(*b*) 1. Bidare Rajakaval ... 833
2. Ere Kaval ... 700

(*c*) For starting Co-operative Farming.

(*d*) Both the kavals are now in the possession of the Revenue Department.

ಶ್ರೀ ಬಿ. ಸಿ. ನಂಜುಂಡಯ್ಯ.—ರೆವೆನ್ಯೂ ಇಲಾಖೆಯವರಿಗೆ ವಹಿಸಿಕೊಟ್ಟಿರುವ ಆಮೃತಮಹಲ್ ಕಾವಲುಗಳಲ್ಲಿ ಈಗ ಕೋ-ಆಪರೇಟಿವ್ ಫಾರ್ಮಿಂಗ್ ಪ್ರಾರಂಭಿಸಲಾಗಿದೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ಇಲ್ಲ. ಇತ್ತೀಚೆಗೆ ಆ ಪ್ರದೇಶವನ್ನು ಜಮೀನಿಲ್ಲದ ಬಡವರಿಗೆ ಹಂಚಿಕೊಡ ಬೇಕೆಂದು ನನ್ನ ಮಿತ್ರರಾದ ಡಾ॥ ಆರ್. ನಾಗನ ಗೌಡರನ್ನು ಕೇಳಿದೆ.

ಶ್ರೀ ಬಿ. ಸಿ. ನಂಜುಂಡಯ್ಯ.—ರೆವೆನ್ಯೂ ಇಲಾಖೆಗೆ ಆ ಜಮೀನು ಹೋಗಿ 4 ವರ್ಷಗಳಾದವು. ಈ 4 ವರ್ಷದಿಂದ ಅದು ಯಾರ ನುಪರ್ದಿನಲ್ಲಿದೆ? ಅಕ್ಯುಯಲ್ಲಾಗಿ ರೆವೆನ್ಯೂ ಇಲಾಖೆ ಹಂಗಾಮಿ ಸಾಗಿಗೆ ಕೊಟ್ಟಿದೆಯೆ ಅಥವಾ ಅಗ್ರಿಕಲ್ಚರಿಸ್ಟ್ ಕಲ್ಟಿವೇಷನ್ ನಡೆಯುತ್ತಿದೆಯೆ?

ಶ್ರೀ ಕಡಿದಾಳ್ ಮಂಜಪ್ಪ.—ಅಗ್ರಿಕಲ್ಚರಿಸ್ಟ್ ಕಲ್ಟಿವೇಷನ್ ನಡೆಯುತ್ತಿರುವುದು ಗೊತ್ತಿಲ್ಲ. ನೋಟೀಸ್.

ಶ್ರೀ ಬಿ. ಸಿ. ನಂಜುಂಡಯ್ಯ.—ಈ 4 ವರ್ಷಗಳಿಂದ ಅಗ್ರಿಕಲ್ಚರಿಸ್ಟ್ ಕಲ್ಟಿವೇಷನ್ ನಡೆಯುತ್ತಿದೆಯೆಂದು ಹೇಳಿದರೂ ರೆವೆನ್ಯೂ ಇಲಾಖೆಗೆ ಹಾಗೆಸಾಗು ಮಾಡುವುದರಿಂದ ಜಮೀನು ಬಿಡಿಸಲು ಸಾಧ್ಯವಾಗಿಲ್ಲವೆಂಬುದು ಗೊತ್ತ?

ಸಭಾಪತಿಯವರು.—ನೋಟೀಸ್ ಬೇಕೆಂದು ಹೇಳಿದ್ದಾರೆ.

ಶ್ರೀ ಬಿ. ಸಿ. ನಂಜುಂಡಯ್ಯ.—ಅಲ್ಲಿ ಕೋ-ಆಪರೇಟಿವ್ ಫಾರ್ಮಿಂಗ್ ಮಾಡಲು ಪ್ರಯತ್ನ ಮಾಡಿದೆಯೆ?

ಶ್ರೀ ಕಡಿದಾಳ್ ಮಂಜಪ್ಪ.—ಅದು ಸಾಧ್ಯವಾಗಲಿಲ್ಲವೆಂದು ವರದಿಯಾಗಿದೆ.

ಶ್ರೀ ಬಿ. ಸಿ. ನಂಜುಂಡಯ್ಯ.—ಗ್ರಾಮ ಪಂಚಾಯತಿಯವರು Co-operative Farming may be done ಎಂದು ತೀರ್ಮಾನ ಮಾಡಿದಮೇಲೆ ಅದನ್ನು ಮೇಲಕ್ಕೆ ವರದಿ ಮಾಡುವಾಗ ತಪ್ಪಾಗಿ cannot be done ಎಂದು ವರದಿಮಾಡಿದ್ದರಿಂದ ಇಷ್ಟು ತಕರಾರಿಗೆ ಕಾರಣವಾಗಿದೆಯೆಂಬುದನ್ನು ವಿಚಾರಿಸುತ್ತೀರಾ?

ಶ್ರೀ ಕಡಿದಾಳ್ ಮಂಜಪ್ಪ.—ಆಗಬಹುದು.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಕೋ-ಆಪರೇಟಿವ್ ಫಾರ್ಮಿಂಗಿಗಾಗಿ ರಿಲೀಸ್ ಮಾಡಿದ ಕಾವಲುಗಳನ್ನು ಇತ್ತೀಚೆಗೆ ನಿರುದ್ಯೋಗಿಗಳಿಗೆ ಕೊಡಲು ಪೂರ್ಣವಾಗಿ ರಿಸರ್ವ್ ಮಾಡಬೇಕೆಂದು ಸರ್ಕಾರದವರು ಒಂದು ಹುಕುಂ ಮಾಡಿದ್ದಾರೆಯೆ?

ಶ್ರೀ ಕಡಿದಾಳ್ ಮಂಜಪ್ಪ.—ಇಲ್ಲ.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಹಾಗೆ ಆಗಿದ್ದರೆ ಅಲ್ಲಿ ಜಮೀನಿಗೆ ಅರ್ಜಿಹಾಕಿರುವ ಸಾವಿರಾರು ಜನರಿಗೆ ನಾಲ್ಕು ವರ್ಷಗಳಿಂದ ಅಂಥ ಅರ್ಜಿಗಳನ್ನು ವಿಲೇ ಮಾಡದಿರುವುದರಿಂದ ಅವರಿಗೆ ತೊಂದರೆಯಾಗಿರುವುದನ್ನು ಗಮನಕ್ಕೆ ತೆಗೆದುಕೊಳ್ಳುತ್ತೀರಾ?

ಶ್ರೀ ಕಡಿದಾಳ್ ಮಂಜಪ್ಪ.—ಆಗಬಹುದು.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಗುಬ್ಬಿತಾಲ್ಲೂಕು ನಿಟ್ಟೂರು ಗ್ರಾಮದ ಹರಿಜನರು ಅಲ್ಲಿ ಫಾರಂ ಮಾಡುವುದಕ್ಕೆ ಅವಕಾಶಕೊಡಬೇಕೆಂದು ಮನವಿಮಾಡಿದ್ದರೆ?

ಶ್ರೀ ಕಡಿದಾಳ್ ಮಂಜಪ್ಪ.—ನೋಟೀಸ್.

ಶ್ರೀ ಬಿ. ಹುಚ್ಚೇಗೌಡ.—ಕೋ-ಆಪರೇಟಿವ್ ಫಾರಂ ಮಾಡುವುದಕ್ಕೆ ಮುಂಚೆ ಜಮೀನಿಲ್ಲದವರಿಗೆ ಹಂಚಬೇಕು, ಒಂದು ಕುಟುಂಬಕ್ಕಾಗುವಷ್ಟು ಹಂಚಿದರೆ ಫಾರಂ ಮಾಡಲು ಅನುಕೂಲವಾಗುತ್ತದೆ ಎಂಬುದನ್ನು ಒಪ್ಪುತ್ತೀರಾ?

ಶ್ರೀ ಕಡಿದಾಳ್ ಮಂಜಪ್ಪ.—ಅದು ಅಭಿಪ್ರಾಯದ ಮಾತು.

ಶ್ರೀ ಬಿ. ಹುಚ್ಚೇಗೌಡ.—ನರ್ಕಾರದವರು ಆ ರೀತಿ ತೀರ್ಮಾನಕ್ಕೆ ಬಂದಿಲ್ಲವೆ?

ಶ್ರೀ ಕಡಿದಾಳ್ ಮಂಜಪ್ಪ.—ಕೋ-ಆಪರೇಟಿವ್ ಫಾರ್ಮಿಂಗ್ ಮಾಡುವುದಕ್ಕೆ ಸಾಧ್ಯವಿಲ್ಲದೆ, ಜಮೀನಿಲ್ಲದಿರುವವರಿಗೆ ಹಂಚಬೇಕೆಂದು ತಿಳಿಸಿಯೆಂದ ಆಗಲೇ ಹೇಳಿದೆ.

Arasinakere Tank near Chelur in Gubbi Taluk.

Q.—899. **Sri B. C. NANJUNDAIYA** (Kolar).—

Will the Government be pleased to state :—

(*a*) the number of times the Arasinakere Tank near Chelur in Gubbi Taluk discharged for the last ten years ;

(*b*) whether it is not a fact that because ' Sulekalve ' which was originally feeding this tank is deviated to Kallambella Tank, this tank is not getting enough water ;

(*c*) whether they will think of allowing this ' Sulekalve ' water to this Arasinakere Tank ?

A.—**Sri Kadidal MANJAPPA** (Minister for Revenue and Public Works).—

(*a*) Twice.

(*b*) No.

(*c*) Does not arise in view of (*b*).

ಶ್ರೀ ಬಿ. ಸಿ. ನಂಜುಂಡಯ್ಯ.—(*b*) ಪ್ರಶ್ನೆಗೆ ಉತ್ತರವಾಗಿ ' No ' ಎಂದು ಹೇಳಿರುವುದಕ್ಕೆ ಆಧಾರ ವೇನು?

ಶ್ರೀ ಕಡಿದಾಳ್ ಮಂಜಪ್ಪ.—ಸ್ಥಳೀಯ ಅಧಿಕಾರಿಗಳು ಪರಿಶೀಲನೆ ಮಾಡಿ ವರದಿ ಮಾಡಿರುವ ಪ್ರಕಾರ.

ಶ್ರೀ ಬಿ. ಸಿ. ನಂಜುಂಡಯ್ಯ.—ಆದರೂ ಕೂಡ ಈ ವಿಷಯವನ್ನು ಮತ್ತೊಂದು ಸಲ ಪರಿಶೀಲಿಸುತ್ತೀರಾ?

ಶ್ರೀ ಕಡಿದಾಳ್ ಮಂಜಪ್ಪ.—ಪರಿಶೀಲಿಸುತ್ತೇವೆ.

Bore-Wells in Villages of Chamarajanagar Taluk.

Q.—976. **Sri U. M. MADAPPA** (Chamarajanagar).—

Will the Government be pleased to state :—

(*a*) the names of villages in Chamarajanagar Taluk, which have bore-wells ;

(*b*) of them, the names of villages which are not deriving any benefit from the bore-wells even though such wells exist ;

(*c*) the reasons thereof ;

(*d*) when these wells were constructed ;

(*e*) the approximate expenditure incurred on each of these wells ;

(*f*) who were responsible for the construction of these wells ;

(*g*) the department under which the management vests at present ?

A.—**Sri Kadidal MANJAPPA** (Minister for Revenue and Public Works).—

(*a*) 1 Udigala, 2 Kuderu, 3 Heggavadipura, 4 Dasahalli, 5 Santhemarahalli and 6 Mamballi.

(*b*) Kuderu and Udigala.

(*c*) Pumpsets have not been fixed and harnessing of these wells has yet to be done.

(*d*) 1 Udigala : in August 1942.
2 Kuderu : in April 1941.
3 Heggavadipura : in January 1944.
4 Dasahalli : 14th January 1945.
5 Santhemaraha li : in July 1931, November 1945 and June 1945.
6 Mamballi : in june 1945.

(*e*) About Rs. 3,000 per bore-well.

(*f*) The former Bureau of Sanitary Engineering, Bangalore, executed these wells at the request of the local bodies.

(*g*) The Village Panchayet is in charge in respect of items 1 to 4 and 6. The bore-wells at Santhemarahalli are maintained by the Public Works Department.

ಶ್ರೀ ಯು. ಎಂ. ಮಾದಪ್ಪ.—ಕುದೇರು ಗ್ರಾಮಕ್ಕೆ ಪಂಪುಸೆಟ್ಟು ಮಂಜೂರಾಗಿದೆಯೇ?